ದಿನಾಂಕ **14.11.2024.**

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 8ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಅಜ್ಜನ ಹೆಸರು ತಿಮ್ಮಯ್ಯ. ಅಜ್ಜಿಯ ಹೆಸರು ದಾಸಮ್ಮ. ಅವರಿಗೆ ನನ್ನ ತಂದೆ ಸಿದ್ದಯ್ಯ ಮತ್ತು ಸಣ್ಣತಿಮ್ಮಯ್ಯ ಹಾಗೂ ಎಲ್ಲಪ್ಪ (ಆರ್-8) ಎನ್ನುವ ಮಕ್ಕಳು ಎನ್ನುವುದು ನಿಜ. ನನ್ನ ತಂದೆ ಸಿದ್ದಯ್ಯ ಮರಣ ಹೊಂದಿದ್ದಾರೆ. ಜಯಮ್ಮ 1ನೇ ಎದುರುದಾರರು ಸಿದ್ದಯ್ಯನ ಹೆಂಡತಿ ಎಂದರೆ ನನ್ನ ತಾಯಿ. ನಾವು 2 ರಿಂದ 7ನೇ ಎದುರುದಾರರು ಅವರ ಮಕ್ಕಳು ಎನ್ನುವುದು ನಿಜ.

2.ಈ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನು ನನ್ನ ತಾತ ತಿಮ್ಮಯ್ಯನಿಗೆ ಸರ್ಕಾರದಿಂದ ಮಂಜೂರಾದ ಜಮೀನು ಎನ್ನುವುದದು ನಿಜ. ನಾವು ಬೋವಿ ಜನಾಂಗಕ್ಕೆ ಸೇರಿದ್ದು ಪರಿಶಿಷ್ಟ ಜಾತಿಗೆ ಸೇರಿದ್ದೇವೆ ಎನ್ನುವುದು ನಿಜ. ಸರ್ಕಾರದವರು ನನ್ನ ತಾತ ತಿಮ್ಮಯ್ಯರವರಿಗೆ ಸದರಿ ಜಮೀನನ್ನು ಉಚಿತವಾಗಿ ನೀಡಿದ್ದಾರೆ ಎನ್ನುವುದು ನಿಜ. ಜಮೀನನ್ನು ಆ ರೀತಿ ಮಂಜೂರು ಮಾಡುವಾಗ ಪರಭಾರೆ ಮಡಬಾರದೆಂಬ ಷರತ್ತು ಇತ್ತು ಎನ್ನುವುದು ನಿಜ. ಶರತ್ತನ್ನು ಉಲ್ಲಂಘನೆ ಮಾಡಿ ನಮ್ಮ ತಾತ ನಮ್ಮ ಊರಿನ ಪುಟ್ಟಾಚಾರ್ ಬಿನ್ ರಂಗಾಚಾರ್ ರವರಿಗೆ ಮಾರಾಟ ಮಾಡಿದ್ದರು ಎನ್ನುವುದು ನಿಜ. ನನ್ನ ತಾತ ಪುಟ್ಟಾಚಾರ್ ರವರ ವಿರುದ್ಧ ಸದರಿ ಕ್ರಯಪತ್ರವನ್ನು ರದ್ದುಪಡಿಸಬೇಕೆಂದು ಭೂಸ್ವಾಧೀನ ಕೋರಿ ಹಾಸನದ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಅರ್ಜಿಯನ್ನು ಪುರಸ್ಕರಿಸಿ ಹಾಸನದ ಉಪವಿಭಾಗಾಧಿಕಾರಿಗಳು27.07.1998ರಂದು ಆದೇಶ ಮಾಡಿದ್ದರು ಎನ್ನುವುದು ನಿಜ. ಪುಟ್ಟಾಚಾರ್ ರವರು ಸದರಿ ಆದೇಶದ ವಿರುದ್ಧ ಜಿಲ್ಲಾಧಿಕಾರಿಯ ಮುಂದೆ ಆರ್.ಮಿಸ್ 6/1993-94 ಸಲ್ಲಿಸಿದ್ದರು ಎನ್ನುವುದು ನಿಜ. ಜಿಲ್ಲಾಧಿಕಾರಿ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾ ಮಾಡಿತು ಎಂದರೆ ನಿಜ. ಪುಟ್ಟಾಚಾರ್ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ನಿಜ. ಸದರಿ ರಿಟ್ ಅರ್ಜಿ ಸಹ ವಜಾ ಆಯಿತು ಎನ್ನುವುದು ನಿಜ. ಆ ನಂತರ ಉಪವಿಭಾಗಾಧಿಕಾರಿ, ಹಾಸನ ರವರು ಸದರಿ ಜಮೀನನ್ನು ನನ್ನ ತಾತ ತಿಮ್ಮಯ್ಯನವರ ವಶಕ್ಕೆ ನೀಡಿದರು ಎನ್ನುವುದು ನಿಜ.

3.ನನ್ನ ತಾತ ತಿಮ್ಮಯ್ಯರವರಿಗೆ ಈ ಆಸ್ತಿ ಹೊರತುಪಡಿಸಿ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎನ್ನುವುದು ನಿಜ. ಸದರಿ ಜಮೀನು ತಿಮ್ಮಯ್ಯನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ಕುಟುಂಬಕ್ಕೆ ಎಂದು ನೀಡಿದ್ದಾರೆ. ಕುಟುಂಬದ ಪರವಾಗಿ ನನ್ನ ತಾತ ತಿಮ್ಮಯ್ಯನಿಗೆ ಸದರಿ ಜಮೀನು ಮಂಜೂರಾಗಿದೆ ಎನ್ನುವ ಕುರಿತು ದಾಖಲಾತಿ ಇದೆ. ಸದರಿ ದಾಖಲಾತಿ ನನ್ನ ಚಿಕ್ಕಪ್ಪ ಎಲ್ಲಪ್ಪಆರ(.8) ಬಳಿ ಇದೆ.

4. 1956ರಲ್ಲಿ ನನ್ನ ತಾತನಿಗೆ ಮದುವೆಯಾಗಿತ್ತೋ ಮಕ್ಕಳು ಜನಿಸಿದ್ದರೋ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನನ್ನ ತಂದೆ ಸಿದ್ದಯ್ಯ ಯಾವ ವರ್ಷದಲ್ಲಿ ಜನಿಸಿದ್ದಾರೆ ಎನ್ನುವ ಮಾಹಿತಿ ನನಗೆ ಇಲ್ಲ. ನನ್ನ ತಾತ ತಿಮ್ಮಯ್ಯರವರು 8ನೇ ಎದುರುದಾರರ ಜೊತೆ ವಾಸವಿದ್ದರು, ಅವರೇ ತಾತನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ಈ ಪ್ರಕರಣದಲ್ಲಿರುವ ಜಮೀನು ನನ್ನ ತಾತ ತಿಮ್ಮಯ್ಯನವರ ಸ್ವಯಾರ್ಜಿತ ಜಮೀನು ಆಗಿದೆ, ಅವರು ದಿನಾಂಕ 21.09.1999ರಲ್ಲಿ ಸದರಿ ಜಮೀನಿನ ಬಗ್ಗೆ ಒಂದು ಮರಣಶಾಸನ ಬರೆದು ನೋಂದಣಿ ಮಾಡಿಸಿದ್ದರು ಎಂದರೆ ಸುಳ್ಳು. ಸದರಿ ನೋಂದಣಿ ಮರಣಶಾಸನದಲ್ಲಿ ಜಮೀನು 8ನೇ ಎದುರುದಾರನಿಗೆ ಸೇರಬೇಕೆಂದು ಬರೆಯಲಾಗಿದೆ ಎಂದರೆ ತಿಮ್ಮಯ್ಯರವರಿಗೆ ಹುಷಾರಿಲ್ಲದೇ ಇದ್ದಾಗ ಅವರನ್ನು ಕರೆದುಕೊಂಡು ಹೋಗಿ ಮೋಸದಿಂದ ಬರೆಸಲಾಗಿದೆ. ದಿನಾಂಕ 02.11.2001ರಂದು ನನ್ನ ತಾತ ಮೃತಪಟ್ಟಿದ್ದಾರೆ ಎಂದರೆ ನಿಜ. ಅವರ ಮರಣಾನಂತರ ಈ ಕೇಸಿನ ಖಾತಾ 8ನೇ ಎದುರುದಾರನ ಹೆಸರಿಗೆ ನೋಂದಣಿ ಆಗಿದೆ ಎಂದರೆ ಮೋಸದಿಂದ ಆ ರೀತಿ ಬರೆಸಿಕೊಂಡಿದ್ದಾರೆ. ಖಾತಾ 8ನೇ ಎದುರುದಾರನ ಹೆಸರಿಗೆ ಬದಲಾವಣೆ ಆದ ಮೇಲೆ ನಾನಾಗಲೀ, ನನ್ನ ಸಹೋದರಿಯರಾಗಲೀ ಅಥವಾ ತಾಯಿಯಾಗಲೀ ಸದರಿ ಖಾತಾ ನಡವಳಿಕೆಗಳನ್ನು ಪ್ರಶ್ನೆ ಮಾಡಿದ್ದೇವೆಯೋ ಎಂದರೆ ಮಾಡಿದ್ದೇವೆ. ಆ ರೀತಿ ಖಾತಾ ನಡವಳಿಯನ್ನು ಪ್ರಶ್ನಿಸಿದ ಬಗ್ಗೆ ನನ್ನಲ್ಲಿ ದಾಖಲಾತಿ ಇಲ್ಲ.

5.ಪರಿಹಾರದ ಹಣದಲ್ಲಿ ನಮಗೂ ಪಾಲು ಇದೆ ಎಂದು ಅರಸೀಕೆರೆ ನ್ಯಾಯಾಲಯದಲ್ಲಿ ಒಂದು ದಾವೆಯನ್ನು ಸಲ್ಲಿಸಿದ್ದೇವೆ ಎನ್ನುವುದು ನಿಜ. ನಂತರ ಪೆಕ್ಯೂನಿಯರಿ ಕಾರ್ಯವ್ಯಾಪ್ತಿಯ ಮೇಲೆ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯ ಅರಸೀಕೆರೆಯಲ್ಲಿ ಓ ಎಸ್ 124/23 ಎಂದು ನೊಂದಾಯಿಸಿಕೊಂಡು ಈಗ ಚಾಲ್ತಿಯಲ್ಲಿ ಇದೆ ಎನ್ನುವುದು ನಿಜ. ಸದರಿ ದಾವೆಯಲ್ಲಿ ಈ ಕೇಸಿನ ಅರ್ಜಿದಾರರನ್ನು ತಿಮ್ಮಯ್ಯನ ಎಲ್ಲಾ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ

ಎನ್ನುವುದು ನಿಜ. ಭೂಸ್ವಾಧೀನವಾದ ಜಮೀನಿನ ಮೇಲೆ ಯಾವುದೇ ಹಕ್ಕು ಇಲ್ಲದೇ ಇದ್ದರೂ, ಅರ್ಜಿದಾರರ ಕಛೇರಿಗೆ ಸುಳ್ಳು ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿರುವ ಜಮೀನು 8ನೇ ಎದುರುದಾರನಿಗೆ ಮಾತ್ರ ಸೇರಿದ್ದು, ಆದ್ದರಿಂದ ಅದರ ಪರಿಹಾರ 8ನೇ ಎದುರುದಾರರೊಬ್ಬರಿಗೇ ಸೇರಬೇಕಾದ್ದು ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ, 8ನೇ ಎದುರುದಾರನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಆಕ್ಷೇಪವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 9 ಮತ್ತು 10ನೇ ಎದುರುದಾರರ ಪರ ವಕೀಲರಿಂದಃ**

ನನ್ನ ತಾತ ತಿಮ್ಮಯ್ಯನಿಗೆ 5 ಜನ ಮಕ್ಕಳು ಎಂದರೆ ನಿಜ. ಅವರು ಯಾರೆಂದರೆ ಜಯಣ್ಣ ಉರುಫ್ ಸಿದ್ದಪ್ಪ (1ನೇ ಎದುರುದಾರರ ಗಂಡ, 2ರಿಂದ 7ನೇ ಎದುರುದಾರರ ತಂದೆ), ಸಣ್ಣತಿಮ್ಮಯ್ಯ, ಎಲ್ಲಯ್ಯ ಅಲಿಯಾಸ್ ಎಲ್ಲಪ್ಪ, ಎಲ್ಲಮ್ಮ ಮತ್ತು ತಿಮ್ಮಮ್ಮ. 10ನೇ ಎದುರುದಾರ ಚಂದ್ರಪ್ಪ ಎಲ್ಲಮ್ಮ ರವರ ಮಗ ಎನ್ನುವುದು ನಿಜ. 9ನೇ ಎದುರುದಾರ ದಾಸಪ್ಪ ಎಲ್ಲಮ್ಮಳ ಗಂಡ. ಈ ಆಸ್ತಿಯ ಮೇಲೆ ಎಲ್ಲರಿಗೂ ಸಮವಾಗಿ ಭಾಗ ಬರಬೇಕು ಎನ್ನುವುದು ನಿಜ.

ಮರು ವಿಚಾರಣೆಃ ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**